A

CCE RF
CCE RR

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003

KARNATAKA SECONDARY EDUCATION EXAMINATION BOARD, MALLESHWARAM, BANGALORE – 560 003

ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2022

S.S.L.C. EXAMINATION, MARCH / APRIL, 2022

ಮಾದರಿ ಉತ್ತರಗಳು

MODEL ANSWERS

ದಿನಾಂಕ : 11. 04. 2022] ಸಂಕೇತ ಸಂಖ್ಯೆ : **98-E**

Date : 11. 04. 2022] **CODE NO. : 98-E**

ವಿಷಯ : ಕರ್ನಾಟಕ ಸಂಗೀತ / ಹಿಂದೂಸ್ಥಾನಿ ಸಂಗೀತ — ಶಾಸ್ತ್ರ ವಿಭಾಗ

Subject : CARNATIC MUSIC / HINDUSTANI MUSIC — THEORY

(ಇಂಗ್ಲಿಷ್ ಮಾಧ್ಯಮ / English Medium)

(ಶಾಲಾ ಅಭ್ಯರ್ಥಿ & ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Fresh & Regular Repeater)

(ಕರ್ನಾಟಕ ಸಂಗೀತ ಅಥವಾ ಹಿಂದೂಸ್ಥಾನಿಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳುವುದು)

(Candidate has to answer either Carnatic Music or Hindustani Music)

[ಗರಿಷ್ಠ ಅಂಕಗಳು : **40**

[Max. Marks : 40

Qn. Nos.	Value Points	Total
	(CARNATIC MUSIC)	
I.	Multiple Choice : 8 × 1 = 8	
1.	Another name for Carnatic music is (A) Uttaradi sangeetha (B) Sugama sangeetha (C) Dakshinadi sangeetha (D) Laghu sangeetha ***Ans. :*** (C) Dakshinadi sangeetha	1

Qn. Nos.	Value Points	Total
2.	'Sa' (shadja) swara is a Prakruthi swara because this swara (A) goes through changes (B) does not go through changes (C) is a anuswara (D) has no sthayi ***Ans. :*** (B) does not go through changes	1
3.	The number of aksharas in one avartha of Tishra jathi Triputa tala is (A) 4 (B) 5 (C) 9 (D) 7 ***Ans. :*** (D) 7	1
4.	Mayamalavagowla raga is called a sampoorna raga because the arohana and avarohana of this raga has (A) seven-seven swaras (B) six-six swaras (C) five-five swaras (D) shuddha swaras ***Ans. :*** (A) seven-seven swaras	1
5.	Chaturashra jathi Ekatala has four aksharas in its one avartha, because the laghu of this tala has (A) three aksharas (B) four aksharas (C) five aksharas (D) seven aksharas ***Ans. :*** (B) four aksharas	1
6.	The birth place of Basavanna is (A) Baada (B) Bhaagamandala (C) Baagevadi (D) Bankaapura ***Ans.*** (C) Baagevadi	1
7.	'Tambura' is a (A) shruthi instrument (B) rythm instrument (C) ghana instrument (D) sushira instrument ***Ans. :*** (A) shruthi instrument	1
8.	Akkamahadevi left her husband, because her husband (A) had broken the conditions (B) was angry on her (C) avoided her many times (D) was lazy ***Ans. :*** (A) had broken the conditions	1

<table>
<tr><th>Qn. Nos.</th><th>Value Points</th><th>Total</th></tr>
<tr><td>II.</td><td>Answer the following questions in a sentence each : 8 × 1 = 8</td><td></td></tr>
<tr><td>9.</td><td>What is arohana ?
Ans. :
The systematic ascending order of swaras is called arohana.
Ex. S R G M P D N Ṡ</td><td>1</td></tr>
<tr><td>10.</td><td>Write the melakartha sankhye of the raga Mechakalyani.
Ans. :
65</td><td>1</td></tr>
<tr><td>11.</td><td>By which name is Mohana raga of Carnatic music called in Hindusthani music system ?
Ans. :
Bhoop</td><td>1</td></tr>
<tr><td>12.</td><td>What is the reason for Kambhoji raga to be called a Bhashanga raga ?
Ans. :
Kambhoji raga has anya swara (foreign note). So it is called a bhashanga raga.
Anya swara : N_3 (Kakali nishada)</td><td>1</td></tr>
<tr><td>13.</td><td>Write any one difference between Dhruvatala and Mathyatala.
Ans. :
<table>
<tr><th>Dhruvatala</th><th>Mathyatala</th></tr>
<tr><td>1) Talanga : 1 laghu 1 druta 2 laghu
2) Symbol : |O||
3) It has three laghus</td><td>1) Talanga : 1 laghu 1 druta 1 laghu
2) Symbol : |O|
3) It has two laghus</td></tr>
</table>
(Consider any one difference)</td><td>1</td></tr>
</table>

<table>
<tr><th>Qn. Nos.</th><th>Value Points</th><th>Total</th></tr>
<tr><td>14.</td><td>What are the names of Kanakadasa's father and mother ?

Ans. :

Kanakadasa's

Father : Beere Gowda

Mother : Bacchamma</td><td>1</td></tr>
<tr><td>15.</td><td>How many aksharas are there in one avartha of khanda jathi atatala ?

Ans. :

Khanda jathi atatala has fourteen aksharas in its one avartha.

its Talanga : 2 laghu + 2 druta

= 5 + 5 + 2 + 2

= 14</td><td>1</td></tr>
<tr><td>16.</td><td>What is the reason for Vasantha raga to be called a vakra raga ?

Ans. :

Vasantha raga has vakraswara sanchara in its arohana. So it is a vakraraga.

arohana : $\underbrace{\text{S M G M}}\ \text{D N}\ \dot{\text{S}}$

avarohana : $\dot{\text{S}}\ \text{N D M G R S}$</td><td>1</td></tr>
<tr><td>III.</td><td>Answer the following questions in two to three sentences each :

7 × 2 = 14</td><td></td></tr>
<tr><td>17.</td><td>Write a difference between Marga and Deshi sangeetha.

Ans. :
<table><tr><th>Marga Sangeetha</th><th>Deshi Sangeetha</th></tr><tr><td>The Devagana which is not in practice now.</td><td>The music which is being used in their respective countries.</td></tr></table></td><td>2</td></tr>
</table>

Qn. Nos.	Value Points	Total
18.	Write any two differences between Carnatic music system and Hindusthani music system.	
	Ans. :	

Carnatic music	***Hindusthani music***
1. There are sixteen swaras in a sthayi.	1. There are twelve swaras in a sthayi.
2. Suladi saptatalas are used.	2. Trital, choutal, Jhaptal etc. are used.
3. Tala is shown by hand.	3. Tala is shown by tabla sathi.
4. Geethe, jathiswara, varna, kriti, pada, javali etc. are Carnatic musical compositions.	4. Dhrupad, dhamar, tarana, Khyal, tappa, bhajan etc. are Hindusthani musical compositions.
5. Veena, flute, nadaswara, mrudanga, ghata etc. are Carnatic musical instruments.	5. Sitar, been, sarod, dilruba, sarangi, santhoor, tabla, pakhawaz etc. are Hindusthani musical instruments.

Consider any two differences. — 2

Qn. Nos.	Value Points	Total
19.	The number of aksharas in one avartha of mishra jathi jhampetala is 10. Why ? ***Ans. :*** Mishra jathi Jhampetala's laghu has 7 aksharas. So this tala has 10 aksharas in one avartha. Mishra jathi Jhampetala. = 1 laghu + 1 anudruta + 1 druta = 7 + 1 + 2 = 10 aksharas	2

Qn. Nos.	Value Points	Total
20.	What is the reason for Basavanna to recall 'Kudala Sangama Deva' at the end of his vachanas ? ***Ans. :*** 'Kudala Sangama Deva' was the 'deity' of Basavanna. So he recalls 'Kudala sangama deva' in his vachanas as his ankitha.	2
21.	How do Rishabha swara prabhedas differ from that of Gandhara ? ***Ans. :*** Rishabha swara prabhedas R_1 = Shuddha rishabha R_2 = Chatushruti rishabha R_3 = Shatshruti rishabha Gandhara Swara prabhedas G_1 = Shuddha gandhara G_2 = Sadharana gandhara G_3 = Anthara gandhara in this way Rishabha swara prabhedas are different from that of Gandhara. They are different in vibrations too.	2
22.	Classify the following Ankithas (pennames) with their respective composers' names : Guruguha, Shyamakrishna, Kagineleyadi Keshava, Chennamallikarjuna. ***Ans. :*** Guruguha — Mutthuswamy Dixitar, Shyamakrishna — Shyamashastry Kagineleyadi Keshava — Kanakadasa, Chennamallikarjuna — Akkamahadevi.	2

Qn. Nos.	Value Points	Total
23.	How does Oudava raga differ from Shadava raga ? ***Ans. :*** Oudava raga has five swaras and Shadava raga has six swaras in arohana and avarohana.	2
IV.	Answer the following questions in brief :	
24.	Explain the classification of musical instruments with an example each. ***Ans. :*** Musical instruments are mainly divided into four kinds. They are (i) Thatha, (ii) Sushira, (iii) Avanaddha and (iv) Ghana. 1. <u>Thatha instruments</u> : These are the instruments which produce musical sound by strings. They are also called string instruments. ***Ex***. Veena, Sitar, Guitar, Santhoor, Violin etc. 2. <u>Sushira instruments</u> : They are wind instruments. They produce musical sounds by wind or air. ***Ex.*** Harmonium, flute, clarionet, Shehnai, Nadaswara etc. 3. <u>Avanddha instruments</u> : Skin or leather instruments are avanaddha instruments. They produce musical sounds by beating on them. They are rhythm instruments. ***Ex.*** Tabla, mrudanga, dolak, dolu, nagari etc. 4. <u>Ghana instruments</u> : The instruments made of clay or metal are called ghana instruments. ***Ex***. morching, ghata, bronze tala etc.	6

Qn. Nos.	Value Points	Total
25.	Design and write the alankara of chaturashra jathi Rupaka tala in musical notation (sangeetha swaralipi). ***Ans. :*** Chaturashra jathi Rupaka tala Talanga : 1 druta 1 laghu Symbol : O $\vert_4$ Aksharas : 2 + 4 = 6 O $\vert_4$ || S R	S R G M	
	R G	R G M P	
	G M	G M P D	
	M P	M P D N	
	P D	P D N $\dot{S}$	
	$\dot{S}$ N	$\dot{S}$ N D P	
	N D	N D P M	
	D P	D P M G	
	P M	P M G R	
	M G	M G R S ||	4

Qn. Nos.	Value Points	Total
	(HINDUSTANI MUSIC)	
I.	Multiple Choice : $8 \times 1 = 8$	
1.	The systematic ascending order of swaras is (A) Arohana (B) Avarohana (C) Shruti (D) Naada ***Ans. :*** (A) Arohana	1
2.	The birth place of Pt. Basavaraja rajaguru is (A) Mansoor (B) Yalivala (C) Kurandavada (D) Purandaragada ***Ans. :*** (B) Yalivala	1
3.	Hindustani music is called 'Uttaradi sangeetha', beause this music is developed in (A) South India (B) North India (C) Karnataka (D) All South part of world ***Ans. :*** (B) North India	1
4.	The art that is called as Gandharva veda is (A) Music (B) Drama (C) Sculpture (D) Drawing ***Ans. :*** (A) Music	1
5.	Raga Bhairavi is called as 'Sampoorna raga' because this raga is of (A) Five-five swaras (B) Five-seven swaras (C) Six-seven swaras (D) Seven-seven swaras ***Ans. :*** (D) Seven-seven swaras	1

Qn. Nos.	Value Points	Total
6.	The group of seven notes (swaras) is called (A) Mukhyanga (B) Saptaka (C) Vadi swara (D) Poorvanga swara ***Ans. :*** (B) Saptaka	1
7.	A small underline is given under Ga, Dha, Ni swaras of raga Jeevanpuri. Because these are (A) Shuddha swaras (B) Teevra swaras (C) Komal swaras (D) Varja swaras ***Ans. :*** (C) Komal swaras	1
8.	Sitar is called a Thatha instrument. Because it (A) is made of wood (B) is a Hindustani music instrument (C) is a metal instrument (D) produces musical sound by its string ***Ans. :*** (D) produces musical sound by its string	1
II.	Answer the following questions in a sentence each : 8 × 1 = 8	
9.	How many matras of Jhaptala are there ? ***Ans. :*** There are Ten (10) matras (beats) in jhaptaal.	1
10.	Why is Bhairav called Uttaranga Pradhana raga ? ***Ans. :*** The vaadi swara that is komal dhaivat (Dha) of raga Bhairav belongs to the uttaranga swara.	1

Qn. Nos.	Value Points	Total
11.	Define the meaning of Khayal. ***Ans. :*** The meaning of Khyal is to think, imagine and enquire.	1
12.	Pt. Panchakshari Gawayi is known as 'Ubhayagayanacharya'. Why ? ***Ans. :*** Pandit Panchakshari Gawayi was a scholor in both Carnatic and Hindustani music system.	1
13.	Name two awards given by the Indian government to Pt. Mallikarjun Mansoor. ***Ans. :*** The Indian government awarded Padmashree, Padma Bhushan, and Padma Vibhushan to Pandit Mallikarjun Mansoor.	1
14.	Durga raga is called Oudava-Oudava raga. Give reason. ***Ans. :*** Durga raga has five-five notes in its arohana and avarohana respectively.	1
15.	Name the vadi swara of raga Desh. ***Ans. :*** Vadi swara of Desh raga is shuddha rishabha.	1
16.	Pt. Vishnu Digambar Paluskar became blind. Why ? ***Ans. :*** Pandit Vishnu Digambar Paluskar lost his eyesight due to the burst of fire crackers.	1

Qn. Nos.	Value Points	Total
III.	Answer the following questions in *two* to *three* sentences each : $7 \times 2 = 14$	
17.	Write a difference between Carnatic music and Hindustani music system. ***Ans. :***	2

Carnatic music	***Hindustani music***
1. There are 16 swaras in one sthayi.	1. There are 12 swaras in one sthayi.
2. Janaka raga and janya raga are the two main raga classifications.	2. Thaat raga and raga ragini are the raga classificattions
3. Suladi sapta talas and chapu talas are in use.	3. Trital, chowtala, jhaptala, Druta ektala etc. are the talas in practice.
4. Talas are depicted with Kriyes, like laghu, druta etc.	4. Talas are depicted without kriyas but are shown with the help of the tabla sathi.
5. Music compositions are geethes, swarajatis, Kritis, keenthanas, javalis, tillanas etc.	5. Music compositions are dhrupad, dhamar, tarana, khyal, thumri, bhajan etc.
6. Veene, violin, flute, Nagaswara, mrudanga dholu, dholak, ghata are the main musical instruments.	6. Sitar, been, sarod, sarangi, santoor, shahanai, bansuri, tabla, pakhawaz are the instruments used.

Qn. Nos.	Value Points	Total
18.	Why Shahanai instrument is called a 'Sushira Vadya' ? ***Ans. :*** Shahanai is a sushira instrument. It produces musical sound by wind or air. So it is called a 'Sushira vadya.'	2
19.	Tuned tanpura produces Ahata naada. How ? ***Ans. :*** The tuned tamburi produces notes due to systematic vibrations and the tone produced is Ahata naada.	2

Qn. Nos.	Value Points	Total
20.	Why is music called as shravana sadhana vidya (Audio based education) ? ***Ans. :*** The very basic skill of a music learner is listening. We understand musical sounds of notes only through ears. The overall music learning is mainly related to listening. So it is a Shravana Sadhana Vidya. (Audio based branch of education)	2
21.	Classify the following instruments into Avanaddha and Ghana : Tabla, Karataal, Jalataranga, Pakhawaz. ***Ans. :*** ***Avanaddha instruments*** – Tabla, Pakhawaz ***Ghana instruments*** – Karataal, Jalataranga	2
22.	Lipi (Notation) is necessary for music. Why ? ***Ans. :*** Music is also a language of different kinds of raga, tala and swaras. There are many different compositions. To recognise, read and understand these compositions, ragas, talas and swaras we need number, symbol and code of swaras and symbol of talas. etc. It is necessary to retain our music to the next generation. Hence lipi (notation) is necessary for music.	2
23.	Classify the following talas into Carnatic music and Hindustani music : Dadra, Aaditala, Bhajan theka, Triputa tala. ***Ans. :*** ***Carnatic music talas*** – Aadi tala, Triputa tala ***Hindustani music talas*** – Dadra, Bhajan theka	2

Answer table for Q. 21:

Avanaddha instruments	***Ghana instruments***
Tabla	Karataal
Pakhawaz	Jalataranga

Answer table for Q. 23:

Carnatic music talas	***Hindustani music talas***
Aadi tala	Dadra
Triputa tala	Bhajan theka

Qn. Nos.	Value Points	Total
IV.	Answer the following questions in brief :	
24.	How do Teentala and Chowtala differ from each other ? Write the information of these talas with their thekas.	

Ans. :

Teentala is a 'band baz' tala. It is used for vilambit khyal and chhota khayal; will be sung in Dhruta laya. In modern time this tala is used in sugam sangeet, light music, devotional music and film music. But chowtala is 'Khulla baz' tala. This tala is used for dhrupad singing only. That is why this tala is called as 'dhrupad' also. From all these points we come to know that teentala and chowtala are different from each other.

The classical information of Teentala

Matras – 16

Division – 4, (4, 4, 4, 4)

Pettu – 03 (On the matras of 1, 5, 13)

Husi – 01 (On the matra of 9th)

Theka

×				×				0				×			
1	2	3	4	5	6	7	8	9	10	11	12	13	14	15	16
Dha	Dhin	Dhin	Dha	Dha	Dhin	Dhin	Dha	Dha	Tin	Tin	Ta	Traka	Dhin	Dhin	Dha

The classical information of Chowtala

Matras – 12

Division – 06 (2, 2, 2, 2, 2, 2)

Pettu – 04 (on the matras of 1, 5, 9, 11)

Husi – 02 (on the matras of 3 & 7)

Theka :

×		0		×		0		×		×	
1	2	3	4	5	6	7	8	9	10	11	12
Dha	Dha	Dhin	Dha	Kita	Dha	Dhin	Dha	Titi	Kata	Gadi	Gana

6

Qn. Nos.	Value Points	Total
25.	Write the swara geethe of raga Brundavani Sarang with swaralipi system.	4

Ans. :

Swarageete of Raga Brundavani Saranga

Sthayi :

×				×				0				×			
1	2	3	4	5	6	7	8	9	10	11	12	13	14	15	16
								Ṡa	Ṡa	N̲i	Pa	Ma	Re	Ṇi	Sa
Re	Re	Ma	Ma	Pa	Pa	N̲i	Pa	Ṇi	Sa	Re	Ma	Re	Sa	Ṇi	Sa
Re	Ma	Pa	N̲i	Pa	Ma	Pa	Ni								

Antrara :

×				×				0				×			
1	2	3	4	5	6	7	8	9	10	11	12	13	14	15	16
								Ma	Ma	Re	Ma	Pa	Pa	N̲i	Pa
Ma	Pa	Ni	Ṡa	Ṙe	Ni	Ṡa	Ṡa	Ni	Ṡa	Ṙe	Ṁa	Ṙe	Ṡa	Ni	Ṡa
Ṙe	Ṡa	Ni	Ṡa	N̲i	Pa	Ma	Pa								

A

CCE RF
CCE RR

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು, 560 003

KARNATAKA SECONDARY EDUCATION EXAMINATION BOARD, MALLESHWARAM, BANGALORE – 560 003

ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2022

S.S.L.C. EXAMINATION, MARCH / APRIL, 2022

ಮಾದರಿ ಉತ್ತರಗಳು

MODEL ANSWERS

ದಿನಾಂಕ : 11. 04. 2022] **ಸಂಕೇತ ಸಂಖ್ಯೆ : 98-K**

Date : 11. 04. 2022] **CODE NO. : 98-K**

ವಿಷಯ : ಕರ್ನಾಟಕ ಸಂಗೀತ / ಹಿಂದೂಸ್ಥಾನಿ ಸಂಗೀತ — ಶಾಸ್ತ್ರವಿಭಾಗ

Subject : CARNATIC MUSIC / HINDUSTANI MUSIC — THEORY

(ಕನ್ನಡ ಮಾಧ್ಯಮ / Kannada Medium)

(ಶಾಲಾ ಅಭ್ಯರ್ಥಿ & ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Fresh & Regular Repeater)

(ಕರ್ನಾಟಕ ಸಂಗೀತ ಅಥವಾ ಹಿಂದೂಸ್ಥಾನಿಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳುವುದು)

(Candidate has to answer either Carnatic Music or Hindustani Music)

[ಗರಿಷ್ಠ ಅಂಕಗಳು : 40

[Max. Marks : 40

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	(ಕರ್ನಾಟಕ ಸಂಗೀತ)	
I.	**ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** 8 × 1 = 8	
1.	ಕರ್ನಾಟಕ ಸಂಗೀತಕ್ಕಿರುವ ಇನ್ನೊಂದು ಹೆಸರು (A) ಉತ್ತರಾದಿ ಸಂಗೀತ (B) ಸುಗಮ ಸಂಗೀತ (C) ದಕ್ಷಿಣಾದಿ ಸಂಗೀತ (D) ಲಘು ಸಂಗೀತ ***ಉತ್ತರ :*** (C) ದಕ್ಷಿಣಾದಿ ಸಂಗೀತ	1

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
2.	‘ಸ’ (ಷಡ್ಜ) ಸ್ವರವು ಒಂದು ಪ್ರಕೃತಿ ಸ್ವರ, ಏಕೆಂದರೆ, ಆ ಸ್ವರವು (A) ಬದಲಾವಣೆ ಹೊಂದುತ್ತದೆ (B) ಬದಲಾವಣೆ ಹೊಂದುವುದಿಲ್ಲ (C) ಅನುಸ್ವರವಾಗಿದೆ (D) ಸ್ಥಾಯಿಯನ್ನು ಹೊಂದಿಲ್ಲ ***ಉತ್ತರ :*** (B) ಬದಲಾವಣೆ ಹೊಂದುವುದಿಲ್ಲ	1
3.	ತಿಶ್ರ ಜಾತಿ ತ್ರಿಪುಟ ತಾಳದಲ್ಲಿನ ಒಂದು ಆವರ್ತದಲ್ಲಿರುವ ಅಕ್ಷರಗಳ ಸಂಖ್ಯೆ (A) 4 (B) 5 (C) 9 (D) 7 ***ಉತ್ತರ :*** (D) 7	1
4.	‘ಮಾಯಾಮಾಳವಗೌಳ’ ರಾಗವನ್ನು ಸಂಪೂರ್ಣ ರಾಗವೆಂದು ಕರೆಯುವರು. ಕಾರಣ ಈ ರಾಗದ ಆರೋಹಣ ಮತ್ತು ಅವರೋಹಣಗಳಲ್ಲಿ (A) ಏಳು-ಏಳು ಸ್ವರಗಳಿವೆ (B) ಆರು-ಆರು ಸ್ವರಗಳಿವೆ (C) ಐದು-ಐದು ಸ್ವರಗಳಿವೆ (D) ಶುದ್ಧ ಸ್ವರಗಳಿವೆ ***ಉತ್ತರ :*** (A) ಏಳು-ಏಳು ಸ್ವರಗಳಿವೆ	1
5.	ಚತುರಶ್ರಜಾತಿ ಏಕತಾಳದ ಒಂದು ಆವರ್ತದಲ್ಲಿ ನಾಲ್ಕು ಅಕ್ಷರಗಳಿವೆ. ಏಕೆಂದರೆ, ಈ ತಾಳದ ಲಘುವಿನಲ್ಲಿ (A) ಮೂರು ಅಕ್ಷರಗಳಿವೆ (B) ನಾಲ್ಕು ಅಕ್ಷರಗಳಿವೆ (C) ಐದು ಅಕ್ಷರಗಳಿವೆ (D) ಏಳು ಅಕ್ಷರಗಳಿವೆ ***ಉತ್ತರ :*** (B) ನಾಲ್ಕು ಅಕ್ಷರಗಳಿವೆ	1
6.	ಬಸವಣ್ಣನವರ ಜನ್ಮಸ್ಥಳ (A) ಬಾಡ (B) ಭಾಗಮಂಡಲ (C) ಬಾಗೇವಾಡಿ (D) ಬಂಕಾಪುರ ***ಉತ್ತರ :*** (C) ಬಾಗೇವಾಡಿ	1
7.	‘ತಂಬೂರಿ’ ಒಂದು (A) ಶೃತಿ ವಾದ್ಯ (B) ತಾಳ ವಾದ್ಯ (C) ಘನ ವಾದ್ಯ (D) ಸುಷಿರ ವಾದ್ಯ ***ಉತ್ತರ :*** (A) ಶೃತಿ ವಾದ್ಯ	1

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
8.	ಅಕ್ಕಮಹಾದೇವಿಯು ತನ್ನ ಪತಿಯನ್ನು ತ್ಯಜಿಸಿದಳು. ಏಕೆಂದರೆ, ಆಕೆಯ ಪತಿಯು (A) ಷರತ್ತುಗಳನ್ನು ಮುರಿದನು (B) ಆಕೆಯ ಮೇಲೆ ಕೋಪಗೊಂಡನು (C) ಆಕೆಯನ್ನು ಬಳಹಷ್ಟುಬಾರಿ ನಿರ್ಲಕ್ಷಿಸುತ್ತಿದ್ದನು (D) ಸೋಮಾರಿಯಾಗಿದ್ದನು ***ಉತ್ತರ :*** (A) ಷರತ್ತುಗಳನ್ನು ಮುರಿದನು	1
II.	**ಒಂದೊಂದು ವಾಕ್ಯದಲ್ಲಿ ಉತ್ತರಿಸುವುದು :** $8 \times 1 = 8$	
9.	ಆರೋಹಣವೆಂದರೇನು ? ***ಉತ್ತರ :*** ಸ್ವರಗಳ ಕ್ರಮವಾದ ಏರುವಿಕೆಯನ್ನು 'ಆರೋಹಣ' ಎನ್ನುವರು. *ಉದಾ.:* ಸ ರಿ ಗ ಮ ಪ ದ ನಿ ಸ	1
10.	ಮೇಚಕಲ್ಯಾಣಿ ರಾಗದ ಮೇಳಕರ್ತ ಸಂಖ್ಯೆಯನ್ನು ಬರೆಯಿರಿ. ***ಉತ್ತರ :*** 65	1
11.	ಕರ್ನಾಟಕ ಸಂಗೀತದ ಮೋಹನ ರಾಗವನ್ನು ಹಿಂದೂಸ್ಥಾನಿ ಪದ್ಧತಿಯಲ್ಲಿ ಯಾವ ಹೆಸರಿನಿಂದ ಕರೆಯುವರು ? ***ಉತ್ತರ :*** ಭೂಪ್	1
12.	ಕಾಂಭೋಜಿ ರಾಗವನ್ನು ಭಾಷಾಂಗ ರಾಗವೆಂದು ಕರೆಯಲು ಕಾರಣವೇನು ? ***ಉತ್ತರ :*** ಕಾಂಭೋಜಿ ರಾಗವು ಅನ್ಯಸ್ವರ ಹೊಂದಿರುವುದರಿಂದ ಇದನ್ನು ಭಾಷಾಂಗ ರಾಗವೆನ್ನುವರು. ಅನ್ಯಸ್ವರ – ನಿ$_3$ (ಕಾಕಲಿ ನಿಷಾದ)	1

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು

13. ಧ್ರುವತಾಳ ಮತ್ತು ಮಠ್ಯತಾಳಗಳ ನಡುವಿನ ಯಾವುದಾದರೂ ಒಂದು ವ್ಯತ್ಯಾಸವನ್ನು ಬರೆಯಿರಿ.

ಉತ್ತರ :

ಧ್ರುವತಾಳ	ಮಠ್ಯತಾಳ
ತಾಳಾಂಗ : 1 ಲಘು 1 ದ್ರುತ 2 ಲಘು	ತಾಳಾಂಗ : 1 ಲಘು 1 ದ್ರುತ 1 ಲಘು
ಚಿಹ್ನೆ : |O||	ಚಿಹ್ನೆ : |O|
ಮೂರು ಲಘುಗಳನ್ನು ಹೊಂದಿದೆ	ಎರಡು ಲಘುಗಳನ್ನು ಹೊಂದಿದೆ

(ಯಾವುದಾದರೂ ಒಂದು ವ್ಯತ್ಯಾಸವನ್ನು ಪರಿಗಣಿಸುವುದು) 1

14. ಕನಕದಾಸರ ತಂದೆ-ತಾಯಿಯರ ಹೆಸರೇನು ?

ಉತ್ತರ :

ಕನಕದಾಸರ ತಂದೆ : ಬೀರೇಗೌಡ

ತಾಯಿ : ಬಚ್ಚಮ್ಮ 1

15. ಖಂಡಜಾತಿ ಅಟತಾಳದ ಒಂದು ಆವರ್ತದಲ್ಲಿ ಎಷ್ಟು ಅಕ್ಷರಗಳಿವೆ ?

ಉತ್ತರ :

ಖಂಡಜಾತಿ ಅಟತಾಳದ ಒಂದು ಆವರ್ತದಲ್ಲಿ ಹದಿನಾಲ್ಕು ಅಕ್ಷರಗಳಿವೆ.

ತಾಳಾಂಗ : 2 ಲಘು 2 ದ್ರುತ

5 + 5 + 2 + 2 = 14 1

16. ವಸಂತರಾಗವನ್ನು ವಕ್ರರಾಗವೆಂದು ಕರೆಯಲು ಕಾರಣವೇನು ?

ಉತ್ತರ :

ವಸಂತರಾಗವು ಆರೋಹಣದಲ್ಲಿ ವಕ್ರಸಂಚಾರವನ್ನು ಹೊಂದಿರುವುದರಿಂದ ಆ ರಾಗವನ್ನು ವಕ್ರರಾಗವೆನ್ನುವರು.

ಆರೋಹಣ : ಸ ಮ ಗ ಮ ದ ನಿ ಸೆ 1

III. **ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ :** $7 \times 2 = 14$

17. ಮಾರ್ಗ ಹಾಗೂ ದೇಶೀ ಸಂಗೀತಗಳ ನಡುವಿನ ಒಂದು ವ್ಯತ್ಯಾಸವನ್ನು ಬರೆಯಿರಿ.

ಉತ್ತರ :

ಮಾರ್ಗ ಸಂಗೀತ	ದೇಶೀ ಸಂಗೀತ
ಇಂದು ಬಳಕೆಯಲ್ಲಿಲ್ಲದ ದೇವಗಾನವೇ ಮಾರ್ಗ ಸಂಗೀತ.	ಆಯಾ ದೇಶಗಳಲ್ಲಿ ವಾಡಿಕೆಯಲ್ಲಿರುವ ಸಂಗೀತವೇ ದೇಶೀ ಸಂಗೀತ.

2

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
18.	ಕರ್ನಾಟಕ ಸಂಗೀತ ಪದ್ಧತಿ ಹಾಗೂ ಹಿಂದೂಸ್ಥಾನಿ ಸಂಗೀತ ಪದ್ಧತಿಗಳ ನಡುವಿನ ಯಾವುದಾದರೂ ಎರಡು ವ್ಯತ್ಯಾಸಗಳನ್ನು ಬರೆಯಿರಿ.	

ಉತ್ತರ :

ಕರ್ನಾಟಕ ಸಂಗೀತ	***ಹಿಂದೂಸ್ಥಾನಿ ಸಂಗೀತ***
1. ಒಂದು ಸ್ಥಾಯಿಯಲ್ಲಿ ಹದಿನಾರು ಸ್ವರಗಳಿವೆ.	1. ಒಂದು ಸ್ಥಾಯಿಯಲ್ಲಿ ಹನ್ನೆರಡು ಸ್ವರಗಳಿವೆ.
2. ಸುಳಾದಿ ಸಪ್ತತಾಳಗಳು ರೂಢಿಯಲ್ಲಿವೆ.	2. ತ್ರಿತಾಲ್, ಚೌತಾಲ್, ಝಪ್‌ತಾಲ್ ಮುಂತಾದ ತಾಳಗಳು ಬಳಕೆಯಲ್ಲಿವೆ.
3. ತಾಳಗಳನ್ನು ಕ್ರಿಯೆಯ ಮೂಲಕ ತೋರಿಸಲಾಗುತ್ತದೆ.	3. ತಾಳಗಳನ್ನು ತಬಲದ ಮೂಲಕ ತೋರಿಸಲಾಗುತ್ತದೆ.
4. ಗೀತೆ, ಜತಿಸ್ವರ, ವರ್ಣ, ಕೃತಿ, ಜಾವಳಿ ಮುಂತಾದ ರಚನೆಗಳಿವೆ.	4. ದ್ರುಪದ್, ಧಮಾರ್, ತರಾನ, ಖ್ಯಾಲ್, ಟಪ್ಪ, ಭಜನ್ ಮುಂತಾದ ರಚನೆಗಳಿವೆ.
5. ವೀಣೆ, ಕೊಳಲು, ನಾದಸ್ವರ, ಮೃದಂಗ, ಘಟ ಮುಂತಾದ ವಾದ್ಯಗಳ ಬಳಕೆಯಿದೆ.	5. ಸಿತಾರ್, ಬಿನ್, ಸರೋದ್ ದಿಲ್ರೂಬ, ಸಾರಂಗಿ, ಸಂತೂರ್ ತಬಲ, ಪಕವಾಜ್ ಮುಂತಾದ ವಾದ್ಯಗಳ ಬಳಕೆಯಿದೆ.

(ಯಾವುದಾದರೂ ಎರಡು ವ್ಯತ್ಯಾಸಗಳನ್ನು ಪರಿಗಣಿಸುವುದು) 2

19. ಮಿಶ್ರಜಾತಿ ಝಂಪೆತಾಳದ ಒಂದು ಆವರ್ತದಲ್ಲಿನ ಅಕ್ಷರಗಳ ಸಂಖ್ಯೆ 10. ಏಕೆ ?

ಉತ್ತರ :

ಮಿಶ್ರಜಾತಿ ಝಂಪೆತಾಳದ ಒಂದು ಆವರ್ತದ ಅಕ್ಷರಗಳ ಸಂಖ್ಯೆ 10. ಏಕೆಂದರೆ ಆ ತಾಳದ ಲಘುವು (ಮಿಶ್ರಜಾತಿಯದ್ದಾಗಿರುವುದರಿಂದ) 7 ಅಕ್ಷರಗಳನ್ನು ಹೊಂದಿದೆ.

ಮಿಶ್ರಜಾತಿ ಝಂಪೆತಾಳ

= 1 ಲಘು + 1 ಅನುದ್ರುತ + 1 ದ್ರುತ

= 7 + 1 + 2

= 10 2

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
20.	ಬಸವಣ್ಣನವರು ತಮ್ಮ ವಚನಗಳ ಕೊನೆಯಲ್ಲಿ 'ಕೂಡಲ ಸಂಗಮದೇವ'ನನ್ನು ಸ್ಮರಿಸಲು ಕಾರಣವೇನು ? ***ಉತ್ತರ :*** ಬಸವಣ್ಣನವರ ಆರಾಧ್ಯದೈವ 'ಕೂಡಲಸಂಗಮದೇವ'. ಆದ್ದರಿಂದ ಅವರು ತಮ್ಮ ವಚನಗಳ ಕೊನೆಯಲ್ಲಿ 'ಕೂಡಲಸಂಗಮದೇವ'ನನ್ನು ನೆನೆಯುತ್ತಾರೆ.	2
21.	ರಿಷಭ ಸ್ವರ ಪ್ರಭೇದಗಳು ಗಾಂಧಾರ ಸ್ವರ ಪ್ರಭೇದಗಳಿಗಿಂತ ಹೇಗೆ ಭಿನ್ನವಾಗಿವೆ ? ***ಉತ್ತರ :*** *ರಿಷಭ ಸ್ವರ ಪ್ರಭೇದಗಳು :* ರಿ$_1$ = ಶುದ್ಧ ರಿಷಭ ರಿ$_2$ = ಚತುಶ್ರುತಿ ರಿಷಭ ರಿ$_3$ = ಷಟ್‌ಶ್ರುತಿ ರಿಷಭ *ಗಾಂಧಾರ ಸ್ವರ ಪ್ರಭೇದಗಳು :* ಗ$_1$ = ಶುದ್ಧ ಗಾಂಧಾರ ಗ$_2$ = ಸಾಧಾರಣ ಗಾಂಧಾರ ಗ$_3$ = ಅಂತರ ಗಾಂಧಾರ ಹೀಗೆ ಪ್ರಭೇದಗಳು ವಿಭಿನ್ನವಾಗಿರುವುದರಿಂದ ರಿಷಭ ಸ್ವರ ಪ್ರಭೇದಗಳು ಗಾಂಧಾರ ಸ್ವರ ಪ್ರಭೇದಗಳಿಗಿಂತ ಭಿನ್ನವಾಗಿವೆ. ಕಂಪನಾಂಕಗಳಲ್ಲೂ ಭಿನ್ನತೆ ಇದೆ.	2
22.	ಈ ಕೆಳಗಿನ ಅಂಕಿತಗಳನ್ನು ಆಯಾ ರಚನಕಾರರ ಹೆಸರುಗಳೊಂದಿಗೆ ವಿಂಗಡಿಸಿ ಬರೆಯಿರಿ : ಗುರುಗುಹ, ಶ್ಯಾಮಕೃಷ್ಣ, ಕಾಗಿನೆಲೆಯಾದಿಕೇಶವ, ಚೆನ್ನಮಲ್ಲಿಕಾರ್ಜುನ. ***ಉತ್ತರ :*** ಗುರುಗುಹ — ಮುತ್ತುಸ್ವಾಮಿ ದೀಕ್ಷಿತರು ಶ್ಯಾಮಕೃಷ್ಣ — ಶ್ಯಾಮಾಶಾಸ್ತ್ರಿಗಳು ಕಾಗಿನೆಲೆಯಾದಿಕೇಶವ — ಕನಕದಾಸರು ಚೆನ್ನಮಲ್ಲಿಕಾರ್ಜುನ — ಅಕ್ಕಮಹಾದೇವಿ	2

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
23.	ಔಡವ ರಾಗವು ಷಾಡವ ರಾಗಕ್ಕಿಂತ ಹೇಗೆ ಭಿನ್ನವಾಗಿದೆ ? ***ಉತ್ತರ :*** ಔಡವ ರಾಗದ ಆರೋಹಣ ಅವರೋಹಣಗಳು ಐದೈದು ಸ್ವರಗಳನ್ನು ಹೊಂದಿವೆ. ಷಾಡವ ರಾಗದ ಆರೋಹಣ ಅವರೋಹಣಗಳು ಆರು ಆರು ಸ್ವರಗಳನ್ನು ಹೊಂದಿವೆ. ಹೀಗಾಗಿ ಔಡವ ರಾಗವು ಷಾಡವ ರಾಗಕ್ಕಿಂತ ಭಿನ್ನವಾಗಿದೆ.	2
IV.	**ಈ ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ :**	
24.	ಸಂಗೀತ ವಾದ್ಯಗಳ ವರ್ಗೀಕರಣವನ್ನು ಒಂದೊಂದು ಉದಾಹರಣೆಯೊಂದಿಗೆ ವಿವರಿಸಿ. ***ಉತ್ತರ :*** ಸಂಗೀತ ವಾದ್ಯಗಳನ್ನು ಬಹುಮುಖ್ಯವಾಗಿ ನಾಲ್ಕು ವಿಭಾಗಗಳಾಗಿ ಮಾಡಲಾಗಿದೆ. ಅವುಗಳೆಂದರೆ, ತತ, ಸುಷಿರ, ಅವನದ್ಧ ಮತ್ತು ಘನ 1. ***ತತ ವಾದ್ಯಗಳು :*** ತಂತಿಯಿಂದ ಕೂಡಿರುವ, ತಂತಿಯಿಂದ ನಾದೋತ್ಪತ್ತಿ ಮಾಡುವ ವಾದ್ಯಗಳನ್ನು ತತ ವಾದ್ಯಗಳೆನ್ನುವರು. ***ಉದಾ. :*** ಪಿಟೀಲು, ವೀಣೆ, ಗಿಟಾರ್, ಸಿತಾರ್ ಮುಂತಾದವು. 2. ***ಸುಷಿರ ವಾದ್ಯಗಳು :*** ಗಾಳಿಯಿಂದ ನಾದೋತ್ಪತ್ತಿ ಮಾಡುವ ವಾದ್ಯಗಳನ್ನು ಸುಷಿರ ವಾದ್ಯಗಳೆನ್ನುವರು. ***ಉದಾ. :*** ಹಾರ್ಮೋನಿಯಂ, ಕೊಳಲು, ನಾದಸ್ವರ, ಕ್ಲಾರಿಯೋನೆಟ್ ಮುಂತಾದವು. 3. ***ಅವನದ್ಧ ವಾದ್ಯಗಳು :*** ಚರ್ಮದಿಂದ ಎಳೆದು ಕಟ್ಟಿ ಮಾಡಿರುವ ವಾದ್ಯಗಳು ಅವನದ್ಧ ವಾದ್ಯಗಳು ಇವು ಬಹುತೇಕ ತಾಳವಾದ್ಯಗಳಾಗಿವೆ. ***ಉದಾ. :*** ತಬಲ, ಮೃದಂಗ, ಡೋಲಕ್, ಡೋಲು, ತಮಟೆ ಮುಂತಾದವು. 4. ***ಘನ ವಾದ್ಯಗಳು :*** ಲೋಹ ಅಥವಾ ಮಣ್ಣಿನಿಂದ ತಯಾರಿಸಿದ ವಾದ್ಯಗಳನ್ನು ಘನವಾದ್ಯಗಳೆಂದು ಕರೆಯುವರು. ಇವು ಬಹುತೇಕ ತಾಳವಾದ್ಯಗಳಾಗಿವೆ. ***ಉದಾ. :*** ಘಟ, ಕಂಚಿನತಾಳ, ಮೋರ್ಚಿಂಗ್ ಮುಂತಾದವು.	6

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
25	ಚತುರಶ್ರಜಾತಿ ರೂಪಕತಾಳದ ಅಲಂಕಾರವನ್ನು ಸ್ವರಲಿಪಿಯೊಂದಿಗೆ ವಿನ್ಯಾಸಗೊಳಿಸಿ ಬರೆಯಿರಿ.	
	ಉತ್ತರ :	
	ತಾಳ : ಚತುರಶ್ರ ಜಾತಿ ರೂಪಕ ತಾಳ	
	ತಾಳಾಂಗ : 1 ದ್ರುತ, 1 ಲಘು	
	ಚಿಹ್ನೆ : O $\|_4$	
	ಅಕ್ಷರಗಳು : 2 + 4 = 6	
	O |	
	|| ಸ ರಿ | ಸ ರಿ ಗ ಮ ||	
	|| ರಿ ಗ | ರಿ ಗ ಮ ಪ ||	
	|| ಗ ಮ | ಗ ಮ ಪ ದ ||	
	|| ಮ ಪ | ಮ ಪ ದ ನಿ ||	
	|| ಪ ದ | ಪ ದ ನಿ ಸೆ ||	
	|| ಸೆ ನಿ | ಸೆ ನಿ ದ ಪ ||	
	|| ನಿ ದ | ನಿ ದ ಪ ಮ ||	
	|| ದ ಪ | ದ ಪ ಮ ಗ ||	
	|| ಪ ಮ | ಪ ಮ ಗ ರಿ ||	
	|| ಮ ಗ | ಮ ಗ ರಿ ಸ ||	4
	(ಹಿಂದೂಸ್ಥಾನಿ ಸಂಗೀತ)	
I.	**ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** 8 × 1 = 8	
1.	ಸ್ವರಗಳ ಏರಿಕೆ ಕ್ರಮವೇ	
	(A) ಆರೋಹಣ (B) ಅವರೋಹಣ	
	(C) ಶೃತಿ (D) ನಾದ	
	ಉತ್ತರ : (A) ಆರೋಹಣ	1

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
2.	ಪಂ. ಬಸವರಾಜ ರಾಜಗುರುರವರ ಜನ್ಮಸ್ಥಳ (A) ಮನಸೂರು (B) ಯಲಿವಾಳ (C) ಕುರಂದವಾಡ (D) ಪುರಂದರಗಡ ***ಉತ್ತರ :*** (B) ಯಲಿವಾಳ	1
3.	ಹಿಂದೂಸ್ಥಾನಿ ಸಂಗೀತವನ್ನು 'ಉತ್ತರಾದಿ ಸಂಗೀತ' ಎಂದು ಕರೆಯುವರು. ಏಕೆಂದರೆ, ಈ ಸಂಗೀತ ಪ್ರಕಾರವು (A) ದಕ್ಷಿಣ ಭಾರತದಲ್ಲಿ ಬೆಳೆದು ಬಂತು (B) ಉತ್ತರ ಭಾರತದಲ್ಲಿ ಬೆಳೆದು ಬಂತು (C) ಕರ್ನಾಟಕದಲ್ಲಿ ಬೆಳೆದು ಬಂತು (D) ಪ್ರಪಂಚದ ದಕ್ಷಿಣ ಭಾಗದಲ್ಲಿ ಬೆಳೆದು ಬಂತು ***ಉತ್ತರ :*** (B) ಉತ್ತರ ಭಾರತದಲ್ಲಿ ಬೆಳೆದು ಬಂತು	1
4.	'ಗಂಧರ್ವ ವೇದ' ಎಂದು ಕರೆಯಲ್ಪಡುವ ಕಲೆ (A) ಸಂಗೀತ (B) ನಾಟಕ (C) ವಾಸ್ತುಶಿಲ್ಪ (D) ಚಿತ್ರಕಲೆ ***ಉತ್ತರ :*** (A) ಸಂಗೀತ	1
5.	ಭೈರವಿ ರಾಗವನ್ನು 'ಸಂಪೂರ್ಣರಾಗ' ಎಂದು ಕರೆಯುವರು. ಏಕೆಂದರೆ, ಈ ರಾಗದಲ್ಲಿ (A) ಐದು–ಐದು ಸ್ವರಗಳಿವೆ (B) ಐದು–ಏಳು ಸ್ವರಗಳಿವೆ (C) ಆರು–ಏಳು ಸ್ವರಗಳಿವೆ (D) ಏಳು–ಏಳು ಸ್ವರಗಳಿವೆ ***ಉತ್ತರ :*** (D) ಏಳು–ಏಳು ಸ್ವರಗಳಿವೆ	1
6.	ಏಳು ಸ್ವರಗಳ ಸಮೂಹವೇ (A) ಮುಖ್ಯಾಂಗ (B) ಸಪ್ತಕ (C) ವಾದಿಸ್ವರ (D) ಪೂರ್ವಾಂಗ ಸ್ವರ ***ಉತ್ತರ :*** (B) ಸಪ್ತಕ	1

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
7.	ಜೀವನ್‌ಪುರಿ ರಾಗದ ಗ, ಧ, ನಿ ಸ್ವರಗಳ ಕೆಳಗೆ ಅಡ್ಡಗೆರೆ ಕೊಡಲಾಗುವುದು. ಏಕೆಂದರೆ, ಅವು	
	(A) ಶುದ್ಧ ಸ್ವರಗಳು (B) ತೀವ್ರ ಸ್ವರಗಳು	
	(C) ಕೋಮಲ ಸ್ವರಗಳು (D) ವರ್ಜ್ಯ ಸ್ವರಗಳು	
	ಉತ್ತರ : (C) ಕೋಮಲ ಸ್ವರಗಳು	1
8.	'ಸಿತಾರ್' ಅನ್ನು 'ತತ್ ವಾದ್ಯ' ಎಂದು ಕರೆಯುವರು. ಏಕೆಂದರೆ, ಅದು	
	(A) ಮರದಿಂದ ಮಾಡಲ್ಪಟ್ಟಿದೆ	
	(B) ಹಿಂದೂಸ್ಥಾನಿ ಸಂಗೀತ ವಾದ್ಯವಾಗಿದೆ	
	(C) ಲೋಹ ವಾದ್ಯವಾಗಿದೆ	
	(D) ತಂತಿಗಳಿಂದ ನಾದೋತ್ಪತ್ತಿ ಮಾಡುತ್ತದೆ	
	ಉತ್ತರ : (D) ತಂತಿಗಳಿಂದ ನಾದೋತ್ಪತ್ತಿ ಮಾಡುತ್ತದೆ	1
II.	**ಒಂದೊಂದು ವಾಕ್ಯದಲ್ಲಿ ಉತ್ತರಿಸುವುದು :** $8 \times 1 = 8$	
9.	ಝಪ್ತಾಳದಲ್ಲಿ ಎಷ್ಟು ಮಾತ್ರೆಗಳಿವೆ ?	
	ಉತ್ತರ :	
	ಝಪ್ತಾಳದಲ್ಲಿ ಹತ್ತು ಮಾತ್ರೆಗಳಿವೆ.	1
10.	ಭೈರವ್ ರಾಗವನ್ನು 'ಉತ್ತರಾಂಗ ಪ್ರಧಾನರಾಗ' ಎಂದು ಕರೆಯುವರು. ಏಕೆ ?	
	ಉತ್ತರ :	
	ಭೈರವ್ ರಾಗದ ವಾದಿಸ್ವರ ಕೋಮಲ ದೈವತವು ಉತ್ತರಾಂಗದ ಸ್ವರವಾಗಿದೆ.	1
11.	ಖಯಾಲ್ ಅರ್ಥವನ್ನು ವ್ಯಾಖ್ಯಾನಿಸಿ.	
	ಉತ್ತರ :	
	ಖಯಾಲ್ ಯೋಚಿಸು, ಕಲ್ಪಿಸು, ವಿಚಾರಿಸು ಎಂಬ ಅರ್ಥವನ್ನು ಕೊಡುತ್ತದೆ.	1

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
12.	ಪಂಡಿತ್ ಪಂಚಾಕ್ಷರಿ ಗವಾಯಿಗಳನ್ನು 'ಉಭಯ ಗಾಯನಾಚಾರ್ಯ' ಎಂದು ಕರೆಯಲು ಕಾರಣವೇನು ? **ಉತ್ತರ :** ಪಂಡಿತ್ ಪಂಚಾಕ್ಷರಿ ಗವಾಯಿಗಳು ಕರ್ನಾಟಕ ಸಂಗೀತ ಮತ್ತು ಹಿಂದೂಸ್ಥಾನಿ ಸಂಗೀತದ ಎರಡು ಪದ್ಧತಿಗಳಲ್ಲಿ ಪಾಂಡಿತ್ಯ ಪಡೆದಿದ್ದರು.	1
13.	ಪಂಡಿತ್ ಮಲ್ಲಿಕಾರ್ಜುನ ಮನಸೂರರಿಗೆ ಭಾರತ ಸರ್ಕಾರ ನೀಡಿದ ಎರಡು ಪ್ರಶಸ್ತಿಗಳನ್ನು ಹೆಸರಿಸಿ. **ಉತ್ತರ :** ಪಂಡಿತ್ ಮಲ್ಲಿಕಾರ್ಜುನ ಮನಸೂರರಿಗೆ ಭಾರತ ಸರ್ಕಾರವು ಪದ್ಮಶ್ರೀ, ಪದ್ಮಭೂಷಣ ಮತ್ತು ಪದ್ಮವಿಭೂಷಣ ಪ್ರಶಸ್ತಿಗಳನ್ನು ನೀಡಿತು.	1
14.	ದುರ್ಗಾ ರಾಗವನ್ನು ಔಡವ–ಔಡವ ರಾಗ ಎಂದು ಕರೆಯಲು ಕಾರಣವೇನು ? **ಉತ್ತರ :** ದುರ್ಗಾ ರಾಗದ ಆರೋಹಣ ಮತ್ತು ಅವರೋಹಣದಲ್ಲಿ ಐದೈದು ಸ್ವರಗಳಿವೆ.	1
15.	ದೇಸ್ ರಾಗದ ವಾದಿ ಸ್ವರವನ್ನು ಹೆಸರಿಸಿ. **ಉತ್ತರ :** ದೇಸ್ ರಾಗದ ವಾದಿ ಸ್ವರವು ಶುದ್ಧ ರಿಷಭವಾಗಿದೆ.	1
16.	ಪಂಡಿತ್ ವಿಷ್ಣು ದಿಗಂಬರ ಫಲುಸ್ಕರ್‌ರವರು ಕುರುಡರಾಗಲು ಕಾರಣವೇನು ? **ಉತ್ತರ :** ಪಂಡಿತ್ ವಿಷ್ಣು ದಿಗಂಬರ ಫಲುಸ್ಕರ್‌ರವರು ಪಟಾಕಿಯ ಸಿಡಿಮದ್ದಿನ ಸ್ಫೋಟದಿಂದ ದೃಷ್ಟಿಹೀನರಾದರು.	1
III.	**ಈ ಕೆಳಗಿನ ಪ್ರಶ್ನೆಗಳಿಗೆ *ಎರಡರಿಂದ ಮೂರು* ವಾಕ್ಯಗಳಲ್ಲಿ ಉತ್ತರಿಸಿ :** $7 \times 2 = 14$	
17.	ಕರ್ನಾಟಕ ಸಂಗೀತ ಮತ್ತು ಹಿಂದೂಸ್ಥಾನಿ ಸಂಗೀತದಲ್ಲಿ ಕಂಡುಬರುವ ಎರಡು ವ್ಯತ್ಯಾಸಗಳನ್ನು ಬರೆಯಿರಿ.	

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು

ಉತ್ತರ :

ಕರ್ನಾಟಕ ಸಂಗೀತ	ಹಿಂದೂಸ್ಥಾನಿ ಸಂಗೀತ
1. ಒಂದು ಸಪ್ತಕದಲ್ಲಿ 16 ಸ್ವರಗಳಿವೆ.	1. ಒಂದು ಸಪ್ತಕದಲ್ಲಿ 12 ಸ್ವರಗಳಿವೆ.
2. ರಾಗ ವಿಭಜನೆಯಲ್ಲಿ ಜನಕ ಮತ್ತು ಜನ್ಯರಾಗ ಪದ್ಧತಿಯನ್ನು ಹೊಂದಿದೆ.	2. ರಾಗ ವಿಭಜನೆಯಲ್ಲಿ ಥಾಟ್ ಮತ್ತು ರಾಗರಾಗಿಣಿ ಪದ್ಧತಿಯನ್ನು ಹೊಂದಿದೆ.
3. ಸುಳಾದಿ ಸಪ್ತತಾಳಗಳು ಮತ್ತು ಛಾಪು ತಾಳಗಳು ರೂಢಿಯಲ್ಲಿದೆ.	3. ತ್ರಿತಾಲ್, ಚೌತಾಲ್, ಝಪ್ತಾಲ್, ದಾದರಾ, ಧೃತ್ ಏಕತಾಲ್ ಮುಂತಾದವು ರೂಢಿಯಲ್ಲಿದೆ.
4. ತಾಳಗಳನ್ನು ಕ್ರಿಯೆಯ ಮೂಲಕ ಎಣಿಸಿ ತೋರಿಸಲಾಗುತ್ತದೆ.	4. ತಾಳದ ಎಣಿಕೆಯನ್ನು ತಬಲಾ ಸಾಥಿಯ ಮೂಲಕ ನಿರ್ವಹಿಸಲಾಗುತ್ತದೆ.
5. ಸಂಗೀತ ರಚನೆಗಳಲ್ಲಿ ಗೀತೆ, ಕೃತಿ ಜತಿಸ್ವರ, ಕೀರ್ತನೆ, ಜಾವಳಿ, ತಿಲ್ಲಾನ ಮುಂತಾದ ರಚನೆಗಳಿವೆ.	5. ಸಂಗೀತ ರಚನೆಗಳಲ್ಲಿ ಧ್ರುಪದ್ ಧಮಾರ್, ತರಾನಾ, ಖ್ಯಾಲ್, ಠುಮ್ರಿ ಭಜನ್ ಮುಂತಾದ ರಚನೆಗಳಿವೆ.
6. ವೀಣೆ, ಪಿಟೀಲು, ಕೊಳಲು, ನಾಗಸ್ವರ ಮೃದಂಗ, ಡೋಲು, ಡೋಲಕ್, ಘಟ ಮುಂತಾದ ಸಂಗೀತ ವಾದ್ಯಗಳು ರೂಢಿಯಲ್ಲಿವೆ.	6. ಸಿತಾರ್, ಬೀನ್, ಸರೋದ್, ಸಾರಂಗಿ, ಸಂತೂರ್, ಶಹನಾಯ್, ಬಾನ್ಸುರಿ, ತಬಲಾ, ಪಖವಾಜ್ ಮುಂತಾದ ಸಂಗೀತ ವಾದ್ಯಗಳು ಬಳಕೆಯಲ್ಲಿವೆ.

2

18. 'ಶಹನಾಯ್' ವಾದ್ಯವನ್ನು ಸುಷಿರವಾದ್ಯ ಎಂದು ಕರೆಯುವರು. ಏಕೆ ?

ಉತ್ತರ :

ಶಹನಾಯ್ ಒಂದು ಸುಷಿರ ವಾದ್ಯ. ಈ ವಾದ್ಯದಲ್ಲಿ ಗಾಳಿಯ ಸಹಾಯದಿಂದ ಸಂಗೀತೋಪಯೋಗಿ ಸ್ವರೋತ್ಪತ್ತಿಯನ್ನುಂಟು ಮಾಡಲಾಗುತ್ತದೆ. ಆದ್ದರಿಂದಲೇ ಈ ವಾದ್ಯವನ್ನು 'ಸುಷಿರ ವಾದ್ಯ' ಎಂದು ಕರೆಯುವರು. 2

19. ಶೃತಿಗೊಳಿಸಿದ ತಂಬೂರಿಯು ಆಹತನಾದವನ್ನು ಉಂಟುಮಾಡುತ್ತದೆ. ಹೇಗೆ ?

ಉತ್ತರ :

ಶೃತಿಗೊಳಿಸಿದ ತಂಬೂರಿಯಲ್ಲಿ ಸ್ವರಗಳು ನಿಯಮಿತ ಕಂಪನಗಳಿಂದ ಉಂಟಾಗುತ್ತದೆ. ಅದು ಆಹತ ನಾದವೇ ಆಗಿರುತ್ತದೆ. 2

20. ಸಂಗೀತವನ್ನು 'ಶ್ರವಣ ಸಾಧನ ವಿದ್ಯೆ' ಎಂದು ಕರೆಯುವರು. ಏಕೆ ?

ಉತ್ತರ :

ಸಂಗೀತದ ಕಲಿಕಾರ್ಥಿಗಳ ಪ್ರಾರಂಭಿಕ ಕೌಶಲವೇ ಆಲಿಸುವಿಕೆ. ಕಲಿಕಾರ್ಥಿ ಸಂಗೀತದ ಸ್ವರಗಳನ್ನು

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
	ಕೇವಲ ಶ್ರವಣೇಂದ್ರಿಯಗಳಿಂದ ಮಾತ್ರ ಗ್ರಹಿಸಬಹುದು. ಸಂಗೀತದಲ್ಲಿರುವ ಸೂಕ್ಷ್ಮ ಸ್ವರಗಳ ಗ್ರಹಿಕೆಯು ಕೂಡ ಆಲಿಸುವಿಕೆಗೆ ಸಂಬಂಧಿಸಿರುವುದರಿಂದ ಸಂಗೀತವನ್ನು 'ಶ್ರವಣ ಸಾಧನ ವಿದ್ಯೆ' ಎಂದು ಕರೆಯುವರು.	2
21.	ಈ ಕೆಳಗಿನ ವಾದ್ಯಗಳನ್ನು ಅವನದ್ಧ ಮತ್ತು ಘನವಾದ್ಯಗಳಾಗಿ ವರ್ಗೀಕರಣ ಮಾಡಿ ಬರೆಯಿರಿ : ತಬಲ, ಕರತಾಳ, ಜಲತರಂಗ, ಫಕವಾಜ್.	

ಉತ್ತರ :

ಅವನದ್ಧ ವಾದ್ಯಗಳು	ಘನ ವಾದ್ಯಗಳು
ತಬಲ	ಕರತಾಳ
ಪಖವಾಜ್	ಜಲತರಂಗ್

2

22. ಸಂಗೀತಕ್ಕೆ ಲಿಪಿಯ ಅಗತ್ಯತೆ ಇದೆ. ಏಕೆ ?

ಉತ್ತರ :

ಸಂಗೀತವು ಕೂಡ ಒಂದು ಭಾಷೆ. ಇಲ್ಲಿ ಬೇರೆ ಬೇರೆ ಸ್ವರ, ರಾಗ ಮತ್ತು ತಾಳಗಳಿವೆ. ಇವುಗಳನ್ನು ಗುರುತಿಸಬೇಕಾದರೆ ಸ್ವರ ಸಂಖ್ಯೆ, ಸ್ವರ ಚಿಹ್ನೆ, ಸ್ವರ ಸಂಕೇತ, ತಾಳ ಮತ್ತು ತಾಳ ಚಿಹ್ನೆಗಳ ಅಗತ್ಯತೆ ಇದೆ. ಹಾಗೆಯೇ ಮುಂದಿನ ಪೀಳಿಗೆಗೆ ಸಂಗೀತವನ್ನು ಉಳಿಸಿಡಬೇಕಾದರೆ ಸಂಗೀತಕ್ಕೆ ಲಿಪಿಯ ಅಗತ್ಯತೆ ಇದೆ. 2

23. ಈ ಕೆಳಗಿನ ತಾಳಗಳನ್ನು ಕರ್ನಾಟಕ ಸಂಗೀತ ಮತ್ತು ಹಿಂದೂಸ್ಥಾನಿ ಸಂಗೀತ ತಾಳಗಳಾಗಿ ವರ್ಗೀಕರಿಸಿ ಬರೆಯಿರಿ.

ದಾದರಾ, ಆದಿತಾಳ, ಭಜನ್ ಠೇಕಾ, ತ್ರಿಪುಟತಾಳ.

ಉತ್ತರ :

ಕರ್ನಾಟಕ ಸಂಗೀತ ತಾಳಗಳು	ಹಿಂದೂಸ್ಥಾನಿ ಸಂಗೀತ ತಾಳಗಳು
ಆದಿತಾಳ	ದಾದರಾ
ತ್ರಿಪುಟತಾಳ	ಭಜನ್ ಠೇಕಾ

2

IV. **ಸಂಕ್ಷಿಪ್ತವಾಗಿ ಉತ್ತರಿಸುವುದು :**

24. ತೀನ್‌ತಾಳ ಮತ್ತು ಚೌತಾಳ ಒಂದಕ್ಕೊಂದು ಭಿನ್ನ. ಹೇಗೆ ? ವಿವರಿಸಿ. ಈ ಎರಡು ತಾಳಗಳ ಮಾಹಿತಿಯನ್ನು ಠೇಕಾದೊಂದಿಗೆ ಬರೆಯಿರಿ.

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು

ಉತ್ತರ :

ತೀನ್ ತಾಳವು ಬಂದ್ ಬಾಜ್‌ನಲ್ಲಿ ನುಡಿಸುವ ತಾಳವಾಗಿದೆ. ವಿಲಂಬಿತ್ ತೀನ್‌ತಾಳದಲ್ಲಿ ವಿಲಂಬಿತ ಖ್ಯಾಲನ್ನೂ, ಧೃತ್ ತೀನ್ ತಾಳದಲ್ಲಿ ಛೋಟಾ ಖ್ಯಾಲನ್ನು ಹಾಡಲಾಗುತ್ತದೆ. ಅಷ್ಟೇ ಅಲ್ಲದೆ ಆಧುನಿಕ ಕಾಲದಲ್ಲಿ ಸುಗಮ ಸಂಗೀತ, ಲಘು ಸಂಗೀತ, ಭಜನಾ ಸಂಗೀತ, ಚಲನ ಚಿತ್ರ ಸಂಗೀತಗಳಲ್ಲಿಯು ಈ ತಾಳವನ್ನು ಬಳಸುತ್ತಾರೆ. ಆದರೆ ಚೌತಾಳವನ್ನು ಖುಲ್ಲಾ ಬಾಜ್‌ನಲ್ಲಿ ನುಡಿಸುತ್ತಾರೆ. ಈ ತಾಳವನ್ನು ಧ್ರುಪದ್ ಗಾಯನಕ್ಕೆ ಬಳಸುವುದರಿಂದ ಇದನ್ನು 'ಧ್ರುಪದ್' ಎಂದೂ ಸಹ ಕರೆಯುವರು. ಈ ಎಲ್ಲಾ ಅಂಶಗಳಿಂದ ತೀನ್‌ತಾಳ ಮತ್ತು ಚೌತಾಳ ಒಂದಕ್ಕೊಂದು ಭಿನ್ನ ಎಂಬುವುದನ್ನು ತಿಳಿಯಬಹುದಾಗಿದೆ.

ತೀನ್‌ತಾಳದ ಮಾಹಿತಿ :

ಮಾತ್ರೆಗಳು – 16

ಭಾಗ – 04, (4, 4, 4, 4 ರಂತೆ)

ಪೆಟ್ಟು – 03 (1, 5, 13 ನೇ ಮಾತ್ರೆಯ ಮೇಲೆ)

ಹುಸಿ – 01 (9ನೇ ಮಾತ್ರೆಯ ಮೇಲೆ)

ಠೇಕಾ :

×				×				0				×			
1	2	3	4	5	6	7	8	9	10	11	12	13	14	15	16
ಧಾ	ಧಿನ್	ಧಿನ್	ಧಾ	ಧಾ	ಧಿನ್	ಧಿನ್	ಧಾ	ಧಾ	ತಿನ್	ತಿನ್	ತಾ	ತ್ರಕ	ಧಿನ್	ಧಿನ್	ಧಾ

ಚೌತಾಳದ ಮಾಹಿತಿ :

ಮಾತ್ರೆಗಳು – 12

ಭಾಗ – 06 (2, 2, 2, 2, 2, 2 ರಂತೆ)

ಪೆಟ್ಟು – 04 (1, 5, 9, 11 ನೇ ಮಾತ್ರೆಯ ಮೇಲೆ)

ಹುಸಿ – 02 (3, 7ನೇ ಮಾತ್ರೆಯ ಮೇಲೆ)

ಠೇಕಾ :

×		0		×		0		×		×	
1	2	3	4	5	6	7	8	9	10	11	12
ಧಾ	ಧಾ	ಧಿಂ	ಧಾ	ಕಿಟ	ಧಾ	ಧಿಂ	ಧಾ	ತಿಟಿ	ಕತ	ಗಧಿ	ಗನ

6

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು

25. ಬೃಂದಾವನಿ ಸಾರಂಗ ರಾಗದ ಸ್ವರಗೀತೆಯನ್ನು ಸ್ವರಲಿಪಿಬದ್ಧಗೊಳಿಸಿ.

ಉತ್ತರ :

ಬೃಂದಾವನಿ ಸಾರಂಗ ರಾಗದ ಸ್ವರಗೀತೆ

ಸ್ಥಾಯಿ :

×	×	0	×
1 2 3 4	5 6 7 8	9 10 11 12	13 14 15 16
		ಸ̇ ಸ̇ ನಿ̱ ಪ	ಮ ರಿ ನಿ̣ ಸ
ರಿ ರಿ ಮ ಮ	ಪ ಪ ನಿ̱ ಪ	ನಿ̣ ಸ ರಿ ಮ	ರಿ ಸ ನಿ̣ ಸ
ರಿ ಮ ಪ ನಿ̱	ಪ ಮ ಪ ನಿ		

ಅಂತರಾ :

×	×	0	×
1 2 3 4	5 6 7 8	9 10 11 12	13 14 15 16
		ಮ ಮ ರಿ ಮ	ಪ ಪ ನಿ̱ ಪ
ಮ ಪ ನಿ ಸ̇	ರಿ̇ ನಿ̱ ಸ̇ ಸ̇	ನಿ ಸ̇ ರಿ̇ ಮ̇	ರಿ̇ ಸ̇ ನಿ ಸ̇
ರಿ̇ ಸ ನಿ ಸ̇	ನಿ̱ ಪ ಮ ಪ		

4